**<u>ಹೆಚ್ಚುವರಿ ಸಿವಿಲ್ ಜಡ್ಜ ಮತ್ತು ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಭಟ್ಕಳ.</u>**

**ಸಿ. ಸಿ. ನಂಬರಃ 2408/2024**

**ಫಿರ್ಯಾದುದಾರರು** ದಿ. ಜನತಾ ಕೋ-ಅಪರೇಟಿವ್ ಕ್ರೆಡಿಟ್ ಸೊಸೈಟಿ, ಲಿಮಿಟೆಡ್,
ಭಟ್ಕಳ ,ಮುರ್ಡೇಶ್ವರ ಶಾಖೆ, ಮಾವಳ್ಳಿ ಗ್ರಾಮ, ಭಟ್ಕಳ ತಾಲೂಕು.
ಪ್ರತಿನಿಧಿಸುವವರು, ಇದರ ಅಧಿಕೃತ ಪ್ರತಿನಿಧಿ/ ಶಾಖಾ ವ್ಯವಸ್ಥಾಪಕರು,
ಶ್ರೀ ರಾಮಚಂದ್ರ ತಂದೆಃ ಮಂಜುನಾಥ ಹೆಗಡೆ

**- ವಿರುದ್ಧ -**

**ಆರೋಪಿತರು** ಶ್ರೀ ಫಜಲ್‌ವುಲ್ಲಾ ತಂದೆಃ ಶವುಲ್ಲಾ ಹಮೀದ ಮಣಿ,
ವಯಸ್ಸುಃ 61 ವರ್ಷ
ಸಾಃ ನ್ಯಾಷನಲ್ ಕಾಲೋನಿ, ಹಂಜಾ ಮಸೀದಿ ಹತ್ತಿರ,
ಮುರ್ಡೇಶ್ವರ, ಭಟ್ಕಳ ತಾಲೂಕು.

**<u>ಆಪಾದನೆ</u>**

ಆರೋಪಿಯಾದ ನೀವು ದಿನಾಂಕಃ 07-02-2019 ರಂದು ಪಿರ್ಯಾದಿ ಸಂಸ್ಥೆಯ ಮುರ್ಡೇಶ್ವರ ಶಾಖೆಯಿಂದ ರೂ.5,00,000/- (ರೂಪಾಯಿ ಐದು ಲಕ್ಷ ಮಾತ್ರ) ಹಣವನ್ನು ಕ್ಯಾಶ್ ಕ್ರೆಡಿಟ್ ಸಾಲವಾಗಿ ಸಾಲದ ಖಾತೆ ಸಂಖ್ಯೆ CC-270 ರಲ್ಲಿ ಪಡೆದುಕೊಂಡಿದ್ದು ಇರುತ್ತದೆ. ಶೇಕಡಾ 14% ವಾರ್ಷಿಕ ಬಡ್ಡಿ ಮತ್ತು ತಪ್ಪಿದಲ್ಲಿ 2% ಬಡ್ಡಿ ದರದಲ್ಲಿ ಒಪ್ಪಿಕೊಂಡು ಕೆಲವು ದಾಖಲೆ ಪತ್ರಗಳನ್ನು ಬರೆದುಕೊಟ್ಟಿದ್ದು ಇರುತ್ತದೆ. ಆದರೆ ಒಪ್ಪಿಕೊಂಡಂತೆ ಸದ್ರಿ ಸಾಲವನ್ನು ಅವಧಿಯೊಳಗೆ ಮಾಡಿದ್ದು ಇರುವುದಿಲ್ಲ. ದಿನಾಂಕಃ 08-08-2024 ರ ತನಕ ಅಸಲು ಬಡ್ಡಿ ಸೇರಿ ಒಟ್ಟೂ ರೂ. 7,16,838/-( ಅಸಲು ರೂ. 5,90,840/-, ಬಡ್ಡಿ ರೂ. 1,09,997/-, ದಂಡದ ಬಡ್ಡಿ ರೂ.16,001/-) ಬಾಕಿ ಇರುತ್ತದೆ. ನಂತರ ಸೆಟಲ್‌ಮೆಂಟ್ ಪ್ರಕಾರ ಸದ್ರಿ ಸಾಲದ ಹಣವನ್ನು ಮರುಪಾವತಿ ಮಾಡುವ ಸಲುವಾಗಿ ನೀವು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಮುರ್ಡೇಶ್ವರ ಶಾಖೆಯ ಚೆಕ್ ನಂಬರ್ 967727 ನ್ನು ಒಟ್ಟೂ ರೂ. 7,16,500/-( ಏಳು ಲಕ್ಷದ ಹದಿನಾರು ಸಾವಿರದ ಐದುನೂರು ಮಾತ್ರ) ಕ್ಕೆ ದಿನಾಂಕಃ 08-08-2024 ಎಂದು ನಮೂದಿಸಿ ಚೆಕ್ ನ್ನು ಫಿರ್ಯಾದಿದಾರರಿಗೆ ನೀಡಿರುತ್ತೀರಿ, ಸದ್ರಿ ಚೆಕ್ಕನ್ನು ಫಿರ್ಯಾದಿ ಸೊಸೈಟಿಯವರು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಮುರ್ಡೇಶ್ವರ ಶಾಖೆಯಲ್ಲಿ ನಗಧೀಕರಣಕ್ಕಾಗಿ ಹಾಜರಪಡಿಸಿದಾಗ,"Funds Insufficient" ಎಂಬ ಹಿಂಬರಹದೊಂದಿಗೆ ದಿನಾಂಕಃ 19-08-2024 ರಂದು ವಾಪಸ್ಸು ಬಂದಿರುತ್ತದೆ.

ನಂತರ ಫಿರ್ಯಾದಿದಾರರು ದಿನಾಂಕಃ 29-08-2024 ರಂದು ತಮ್ಮ ವಕೀಲರ ಮೂಲಕ ಲೀಗಲ್ ನೋಟಿಸನ್ನು ರಿಜಿಸ್ಟರ್ ಅಂಚೆ ಮುಖಾಂತರ ನಿಮಗೆ ಕಳುಹಿಸಿದ್ದು, ಸದ್ರಿ ಚೆಕ್ಕಿನಲ್ಲಿ ನಮೂದಿಸಿರುವ ಹಣವನ್ನು ನೋಟಿಸು ತಲುಪಿದ 15 ದಿನಗಳೊಳಗೆ ಮರು ಮಾಡುವಂತೆ ತಿಳಿಸಿದ್ದು, ಸದ್ರಿ ನೋಟಿಸ್ಸನ್ನು ನೀವು ಸ್ವೀಕರಿಸದೇ ದಿನಾಂಕಃ 11-09-2024 ರಂದು Unclaimed ಎಂದು ವಾಪಸ್ಸು ಬಂದಿರುತ್ತದೆ. ಆದರೆ ಇಂದಿನವರೆಗೂ ನೀವು ಚೆಕ್ಕಿನ ಹಣವನ್ನು ಪಾವತಿ ಮಾಡದೆ ಆ ಮೂಲಕ ನೆಗೋಶಿಯೇಬಲ್ ಇನ್‌ಸ್ಟ್ರುಮೆಂಟ ಆಕ್ಟ ಕಲಂ 138 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವೆಸಗಿದ್ದೀರಿ ಎಂದು ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಪ್ರಶ್ನೆ – ನಿಮ್ಮ ಮೇಲೆ ಹೊರಿಸಲಾದ ಆಪಾದನೆ ಕೇಳಿದ್ದೀರಾ? ಅದು ನಿಮಗೆ ತಿಳಿಯಿತೇ?

ಉತ್ತರ – ಹೌದು

ಪ್ರಶ್ನೆ – ನೀವು ಸದ್ರಿ ಆಪಾದನೆಯನ್ನು ಒಪ್ಪಿಕೊಳ್ಳುತ್ತೀರಾ? ಅಥವಾ ನಿಮ್ಮ ವಿರುದ್ಧ ವಿಚಾರಣೆ ನಡೆಯಬೇಕೇ?

ಉತ್ತರ – ಇಲ್ಲ. ವಿಚಾರಣೆಯಾಗಬೇಕು.

(ಮೇಲಿನ ಆಪಾದನೆಯನ್ನು ಆಪಾದಿತನಿಗೆ ತಿಳಿದಿರುವ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿ ಅವರು ನೀಡಿದ ಉತ್ತರವನ್ನು ಯಥಾರೀತಿ ಬರೆದುಕೊಂಡಿರುವುದಾಗಿ ಈ ಮೂಲಕ ದೃಢೀಕರಿಸಲಾಗಿದೆ.

ಸಹಿ ಇದೆ/-

**(ಶ್ರೀಮತಿ.ಧನವತಿ)**

ಹೆಚ್ಚುವರಿ ಸಿವಿಲ್ ಜಡ್ಜ ಮತ್ತು

ದಿನಾಂಕಃ 31-07-2025. ನ್ಯಾಯಿಕ ದಂಡಾಧಿಕಾರಿ, ಭಟ್ಕಳ.